ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಆರಾಧನಾ ಯೋಜನೆ ಕುರಿತು

610 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕಾನೂನು ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಆದರಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾದ ಹಣವೆಷ್ಟು?

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು):

ಅ)

1991-92ರಲ್ಲಿ ರೂ. 13,64,710-00
1992-93ರಲ್ಲಿ ರೂ. 14,40,000-00
1993-94ರಲ್ಲಿ ರೂ. 9,10,000-00

ಆ)

ಕ್ರ.ಸಂ	ತಾಲ್ಲೂಕು	ಬಿಡುಗಡೆ ಮಾಡಿರುವ ಅನುದಾನ ರೂ. ಸಾವಿರಗಳಲ್ಲಿ
1)	ಚಿಕ್ಕಮಗಳೂರು	11,42,225-00
2)	ಮೂಡಿಗೆರೆ	3,47,100-00
3)	ಕೊಪ್ಪ	2,18,000-00
4)	ಶೃಂಗೇರಿ	49,000-00
5)	ತರೀಕೆರೆ	2,98,000-00
6)	ಕಡೂರು	5,77,000-00
7)	ನರಸಿಂಹರಾಜಪುರ	86,000-00
	ಒಟ್ಟು	27,17,325-00

ಉಳಿಕೆ ರೂ. 9,97,380-00ಗಳನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿದ್ದು ಧಾರ್ಮಿಕ ದತ್ತಿ ಆಯುಕ್ತರ ವತಿಯಿಂದ, ಜಿಲ್ಲೆಗೆ ಬಿಡುಗಡೆ ಮಾಡಲಾಗುವುದು.

ಶ್ರೀಮತಿ ಮೋಟಮ್ಮ : ತಾವು ಉತ್ತರದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ 27,17,325-00 ರೂ.ಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿರುತ್ತೀರಿ.

(ಜನತಾದಳದ ಸದಸ್ಯರುಗಳು ಭಾವಿಯಲ್ಲಿ ನಿಂತುಕೊಂಡು "ನ್ಯಾಯಾಂಗ ತನಿಖೆ ಆಗಲೇಬೇಕು" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಚಿಕ್ಕಮಗಳೂರು ತಾಲ್ಲೂಕಿಗೆ 11,42,225-00 ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ತಾವು ಈ ರೀತಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣ ಕಡಿಮೆ ಇದೆ. ಇದನ್ನು ಹೆಚ್ಚು ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ತಾಲ್ಲೂಕುಗಳಿಗೆ ಬಿಡುಗಡೆ ಮಾಡಿರುವ ಹಣದಲ್ಲಿ ವ್ಯತ್ಯಾಸವಿರುವುದು ನಿಜ. ಸ್ಥಳದ ಅವಶ್ಯಕತೆಗಳ ಮೇಲೆ ಹಣವನ್ನು ಒದಗಿಸಲಾಗಿದೆ. ನೀವು ಎಷ್ಟು ಯೋಜನೆಗಳನ್ನು ಕೊಟ್ಟಿದ್ದೀರೋ ಹಾಗೂ ಎಷ್ಟು ಕೆಲಸಗಳನ್ನು ಸೂಚಿಸಿದ್ದೀರೋ ಅದರ ಆಧಾರದ ಮೇಲೆ ಹಣ ಬಿಡುಗಡೆಯಾಗುತ್ತದೆ. ಇನ್ನೂ ಹೆಚ್ಚು ಹಣ ಬೇಕಾದರೆ ಒದಗಿಸಲು ಸರ್ಕಾರ ಸಿದ್ಧವಿದೆ.

ಶ್ರೀಮತಿ ಮೋಟಮ್ಮ: ಇದನ್ನು ನಾನು ಒಪ್ಪುವುದಿಲ್ಲ. ತಾಲ್ಲೂಕುವಾರು ಹಣವನ್ನು ಬಿಡುಗಡೆ ಮಾಡಬೇಕು. ಒಂದು ತಾಲ್ಲೂಕಿಗೆ ಹೆಚ್ಚು ಒಂದು ತಾಲ್ಲೂಕಿಗೆ ಕಡಿಮೆ ಕೊಡುವುದು ಸರಿಯಲ್ಲ.

(ಜನತಾದಳದ ಶಾಸಕರುಗಳು ಭಾವಿಯಲ್ಲಿ ನಿಂತುಕೊಂಡು "ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ; ನ್ಯಾಯಾಂಗ ತನಿಖೆ ಆಗಲೇಬೇಕು" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಉಳಿದ ಹಣವಾದ 9,97,380-00 ರೂ.ಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಸದ್ಯದಲ್ಲೇ ಅದನ್ನು ಬಿಡುಗಡೆ ಮಾಡಲಾಗುವುದು.

ಶ್ರೀಮತಿ ಮೋಟಮ್ಮ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಿದ್ದೀರಾ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ ಎಂಬ ವಿವರ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(ಜನತಾದಳದ ಶಾಸಕರುಗಳು ಭಾವಿಯಲ್ಲಿ ನಿಂತುಕೊಂಡು "ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ" ಎಂದು ಕೂಗುತ್ತಿದ್ದರು)

ಶ್ರೀಮತಿ ಮೋಟಮ್ಮ: ಕೂಡಲೆ ಐದು ಲಕ್ಷ ರೂ.ಗಳನ್ನು ಪ್ರತಿ ತಾಲ್ಲೂಕಿಗೂ ಬಿಡುಗಡೆ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾರವರು ಮತ್ತು ಇತರ ಸದಸ್ಯರುಗಳಿಗೆ ನಾನು ಪುನಃ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ|| ಜೀವರಾಜ ಆಳ್ವ: ನ್ಯಾಯಾಂಗ ತನಿಖೆ ಮಾಡಿಸಬೇಕು.

12.15 ಪಿ.ಎಂ

(ಜನತಾ ದಳದ 6 ಮಂದಿ ಸದಸ್ಯರು ವೆಲ್‌ನಲ್ಲಿ ನಿಂತು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು: ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಸಿಕೊಂಡಿದ್ದೇನೆ. ಆದರೆ ಅವರುಗಳು ನನ್ನ ಮಾತಿಗೆ ಪುರಸ್ಕಾರ ಕೊಡದೆ ನನ್ನ ಅಧಿಕಾರ ವಿಷಯದಲ್ಲಿ ಲಕ್ಷ್ಯ ಇಲ್ಲದೆ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮವಾಗಿ ಉದ್ದೇಶಪೂರ್ವಕವಾಗಿ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ನಾನು ನಿಯಮ 331ರ ಮೇರೆಗೆ

ಈ ಕೆಳಕಂಡ ಸದಸ್ಯರು ಸದನದ ಕಾರ್ಯಕಲಾಪಗಳಿಗೆ ಸತತವಾಗಿ ಅಡ್ಡಿ ಉಂಟು ಮಾಡುತ್ತಿರುವುದರಿಂದ ಅವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ

1. ಶ್ರೀ ಪಿ.ಜಿ.ಆರ್. ಸಿಂಧ್ಯ
2. ಶ್ರೀ ಹೆಚ್.ವೈ. ಮೇಟಿ
3. ಶ್ರೀ ಅಜಯ್‌ಕುಮಾರ್ ಸರ್‌ನಾಯಕ್
4. ಶ್ರೀ ಜಿ.ಜಿ. ವಲಗುತ್ತಿ
5. ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್
6. ಡಾ|| ಜೀವರಾಜ್ ಆಳ್ವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯ ಅಜಯ್‌ಕುಮಾರ್ ಸರ್‌ನಾಯಕ್, ಡಾ|| ಜೀವರಾಜ್ ಆಳ್ವ, ಹೆಚ್.ವೈ. ಮೇಟಿ, ಬಸವರಾಜ್ ಪಾಟೀಲ್ ಅಟ್ಟೂರ್, ಜಿ.ಜಿ. ವಲಗುತ್ತಿ, ಇವರುಗಳನ್ನು ಸದರಿ ಅಧಿವೇಶನ ಮುಗಿಯುವವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯ, ಅಜಯ್‌ಕುಮಾರ್ ಸರ್‌ನಾಯಕ್, ಡಾ|| ಜೀವರಾಜ್ ಆಳ್ವ, ಹೆಚ್.ವೈ. ಮೇಟಿ, ಬಸವರಾಜ್ ಪಾಟೀಲ್ ಅಟ್ಟೂರ್, ಜಿ.ಜಿ. ವಲಗುತ್ತಿ, ಇವರುಗಳನ್ನು ಸದರಿ ಅಧಿವೇಶನ ಮುಗಿಯುವ ವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತಡೆಯುವುದು.

(ನಿರ್ಣಯ ಅಂಗೀಕಾರವಾಯಿತು)

ಅಧ್ಯಕ್ಷರು: ಮೇಲೆ ಉಲ್ಲೇಖಿಸಿದ ಸದಸ್ಯರನ್ನು ಅಧಿವೇಶನ ಮುಗಿಯುವವರೆಗೆ ಸಭೆಗೆ ಬಾರದಂತೆ ಆದೇಶಿಸುತ್ತೇನೆ.

(ಜನತಾ ದಳದ 6 ಮಂದಿ ಸದಸ್ಯರು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆ ಕೂಗುತ್ತಾ ಹೊರ ನಡೆದರು)

ಶ್ರೀಮತಿ ಮೋಟಮ್ಮ: ಈ ಗಲಾಟೆಯಲ್ಲಿ ನನ್ನ ಪ್ರಶ್ನೆಗೆ ಕೊಟ್ಟ ಉತ್ತರ ಏನು ಎಂದು ಅರ್ಥವಾಗಲಿಲ್ಲ. 9 ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಪ್ರತಿ ತಾಲ್ಲೂಕಿಗೆ 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಆರಾಧನಾ ದೇವಸ್ಥಾನಗಳಿಗೆ ಪ್ರತಿ ಶಾಸಕರ ಕ್ಷೇತ್ರಕ್ಕೆ 5-5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೆ ಬಿಡುಗಡೆ ಮಾಡಲಿಲ್ಲ. ಚಿಕ್ಕಮಗಳೂರು ಜಿಲ್ಲೆಗೆ ಹೆಚ್ಚಿಗೆ ಬೇಡಿಕೆ ಇತ್ತು ಎಂದು ಕೊಟ್ಟಿರಿ. ನಾವು ಕೂಡ ಬೇಡಿಕೆಯನ್ನು ಸಲ್ಲಿಸಿದ್ದೇವೆ. ನಮ್ಮಲ್ಲಿ ಕೂಡ ಬೇಡಿಕೆ ಜಾಸ್ತಿ ಇದೆ. ಪ್ರತಿ ಶಾಸಕರ ಕ್ಷೇತ್ರಕ್ಕೆ 5 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದಾದರೂ ಕೊಡಬೇಕೆಂದು ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಕೇವಲ ಒಂದೇ ಕಡೆ ಕೊಡಬಾರದು, ಆಯಾಯ ಕ್ಷೇತ್ರಕ್ಕೆ 5